ಅವನ ಇಡೀ ಮೈ ಜಿಲಜಿಲನೆ ಬೆವೆತುಹೋಗಿತ್ತು. ತನ್ನ ಬದುಕಿನ ಸಂದರ್ಭದಲ್ಲಿ ತನ್ನ ಹೆಂಡತಿಯಿಂದ ಇಂಥದ್ದೊಂದು ಮಾತನ್ನು ಕೇಳುತ್ತೇನೆಂದು ಅವನಿಗೆ ಕನಸು ಮನಸಿನಲ್ಲಿಯೂ ಎಣಿಕೆ ಇರಲಿಲ್ಲ. ಅವನೇನು?! ಪ್ರಾಯಶಃ ಯಾವ ಗಂಡಂದಿರೂ ತಮ್ಮ ಹೆಂಡತಿಯರಿಂದ ಇಂಥದ್ದೊಂದು ಮಾತನ್ನು ಕೇಳಿರಲು, ಸಾಧ್ಯವೇ ಇಲ್ಲ! ಅವಳಿಗೆ ಏನು ಉತ್ತರ ಕೊಡಬೇಕು ಎಂಬುದು ತಕ್ಷಣ ಇರಲಿ, ಬದುಕಿಡೀ ಯೋಚಿಸಿದರೂ ತಿಳಿಯದಂತಹ ಪ್ರಶ್ನೆಯದು! ಇವಳಿಗೇನಾದರೂ ಹುಚ್ಚು ಹಿಡಿದಿದೆಯೆ? ಅವನಲ್ಲಿ ಪ್ರಶ್ನೆ ಮೂಡಿತ್ತು. ಆದರೆ ಅವಳು ಆ ಮಾತುಗಳನ್ನು ಹೇಳುವುದಕ್ಕೆ ಮುನ್ನವೇ, ''ನೀವು ನನ್ನನ್ನು ಹುಚ್ಚಿ ಎನ್ನಿ, ರಾಕ್ಷಸಿ ಎನ್ನಿ, ಬುದ್ಧಿ ಇಲ್ಲದವಳೆನ್ನಿ, ಮೂರೂ ಬಿಟ್ಟವಳೂ ಎನ್ನಿ...'' ಪೀಠಿಕೆ ಬಹಳ ಉದ್ದವಾಗಿಯೇ ಇತ್ತು. ಆ ಮಾತು ಕೇಳಿದ ನಂತರ ಅವನಿಗೆ, ಅವಳನ್ನು ಕುರಿತಂತೆ ಏನನ್ನೂ ಹೇಳುವ, ಕೇಳುವ ಅವಕಾಶವನ್ನೂ ಉಳಿಸಿರಲಿಲ್ಲ ಅವಳು. ಬಾಯಿಗೆ ಬೆಣೆ ಹೊಡೆದಂತೆ ಕೂರುವುದೊಂದೆ ಇದೀಗ ಅವನಿಗಿದ್ದ ದಾರಿ. ಹಾಗೆಂದು ಮೌನವಾಗಿ ಉಳಿದುಬಿಟ್ಟರೆ... ಸಮಸ್ಯೆಯೇನೂ ಪರಿಹಾರವಾಗುವುದಿಲ್ಲ. ಅದು ಗುಡ್ಡದಂತೆ ಬೆಳೆಯುತ್ತಲೇ ಹೋಗಿಬಿಡುತ್ತದೆ. ಹಾಗೆ ನೋಡಿದರೆ ಅವನಿಗೆ ಆ ಪ್ರಶ್ನೆಯೇ 'ಔಟ್ ಆಫ್ ಸಿಲಬಸ್' ಎಂದು ಅನ್ನಿಸುತ್ತಿದೆ. ಉತ್ತರಿಸಲೇಬೇಕಾದ ದರ್ದಿನಲ್ಲಿ ಅವನು, ಅವಳ ಮಾತನ್ನೇ ಕಾಪಿ ಮಾಡಿದ್ದ; ''ಹುಚ್ಚುಗಿಚ್ಚು ಹಿಡಿದಿದ್ಯಾ ನಿಂಗೆ?''

ಅವಳು ಹುಚ್ಚಿಯಂತೆಯೇ ಅವನ ಕಡೆ ನೋಡಿದ್ದಳು. ''ನನ್ನ ಮಾತನ್ನೇ ಹೇಳ್ತಾ ಇದ್ದೀರಿ. ನನಗೆ ಹಿಡಿಯೋ ಹುಚ್ಚಿಂದ ತಪ್ಪಿಸಿಕೊಳ್ಳಲಿಕ್ಕಾಗಿ ನಾನು...'' ಅವಳು ಮಾತು ಮುಂದುವರಿಸಲು ಅವಕಾಶವಾಗದಂತೆ ಅವನು, ''ಸಾಕು ಬಾಯಿ ಮುಚ್ಚು'' ಅಸಹನೆಯಿಂದ ಕಿರುಚಿದ್ದ. ''ಅವತ್ತಿನಿಂದಾನೂ ಇದೊಂದೇ ಮಾತು ಹೇಳಿಕೊಂಡು ಬರ್ತಾ ಇದ್ದೀರಾ'' ಅವಳು ಮಾತು ನಿಲ್ಲಿಸಲು ತಯಾರಿಲ್ಲದಂತೆ ಮುಂದುವರೆಸಿದ್ದಳು. ''ನೀನೇನು ನನ್ನ ಮಾನ ಹರಾಜ್ ಹಾಕ್ಬೇಕೂಂತಾನೇ ತೀರ್ಮಾನ ಮಾಡಿಬಿಟ್ಟಿದ್ದೀಯಾ?'' ಅವನು ಮತ್ತಷ್ಟು ಸಿಡಿದಿದ್ದ. ಜಪ್ಪಯ್ಯ ಎಂದರೂ ಅವಳು ಜಗ್ಗಲು ಸಿದ್ಧವಿರಲಿಲ್ಲ.

ಅವನು ಮೌನವಾಗಿ ಕುಸಿದಿದ್ದ.

★★★

ಅವನು ಸಾಮಾನ್ಯ, ಸಾಂಪ್ರದಾಯಿಕ ಕುಟುಂಬದ ಹುಡುಗ. ಅಪ್ಪಅಮ್ಮ ತಮ್ಮ ಬದುಕಿನ ಕನಸುಗಳನ್ನು ಈಡೇರಿಸುವ ದೊಡ್ಡ ಮೊತ್ತವಾಗಿಯೇ ಮಗನನ್ನು ಬೆಳೆಸಿದ್ದರು. ಹೆತ್ತವರ ಕಷ್ಟ ಅವನಿಗೆ ದಿನವೂ ಕಾಣುವಂಥದ್ದೇ! ಬೆಳಗಿನ ನಾಲ್ಕು ಗಂಟೆಗೇ ಮನೆಯಲ್ಲಿ ಆರಂಭವಾಗುವ ಇಡ್ಲಿ, ದೋಸೆಯ ವ್ಯವಹಾರ. ಇಡ್ಲಿ ದೋಸೆಗಳು ಹದವಾಗಿ ಬೇಯುವಂತೆಯೇ ಇವನೂ ಬೆಂದ. ಒಂದೊಂದೇ ಮೆಟ್ಟಿಲುಗಳನ್ನೇರಿದ. ಗುರಿ ಎಂದುಕೊಂಡದ್ದನ್ನು ಮುಟ್ಟಿದಾಗ ಸಿಕ್ಕಿದ್ದು ಹೆಸರಾಂತ ಐ.ಟಿ. ಕಂಪನಿಯ ಕೆಲಸ. ಲಕ್ಷಗಳು ಹುಣಸೇಬೀಜಗಳಂತೆ ಕೈತುಂಬಿ ತುಳುಕಿದ ಸಂತಸ.

ಇಡ್ಲಿ, ದೋಸೆಯ ವ್ಯವಹಾರ ನಿಂತಿತ್ತು. ಬಂಗಲೆ, ಐಷಾರಾಮಿ ಕಾರು, ಚಿನ್ನ, ಎಲ್ಲವೂ ಸಾಂಗವಾಗಿ ಬಂದು ಬದುಕನ್ನು ಸೇರಿದ್ದವು. ಮದುವೆಯ ಮಾತು ಆರಂಭವಾಗಿತ್ತು. ಅವನು ತುಂಬಾ ಚೆಂದವಿರುವ, ಹೆಚ್ಚು ಓದಿರದ, ಮೆಚ್ಚಿನ ಮಡದಿಯಾಗಿ ಮನೆ ತುಂಬಾ ಓಡಾಡಿಕೊಂಡು ಸಂತೃಪ್ತ ಜೀವನ ನೀಡುವಂಥ ಹೆಣ್ಣನ್ನು ವರಿಸಲು ಇಚ್ಛಿಸಿದ್ದ. ''ಇದೇನೋ ಇದು ಗೂಬೆ ಥರಾ ನಿನ್ನಾಸೆ. ಐ.ಟಿ. ಕಂಪನೀಲೇ ದುಡಿಯೋ ಅಂಥ ಹುಡುಗೀನಾ ಬಯಸ್ಬೇಯಾ ಅಂದ್ರೆ'' ಅವನಮ್ಮ ನಕ್ಕಿದ್ದರು. ಓದಿ, ಬರೆದು, ಕೆಲಸ ಮಾಡುವ ಹೆಣ್ಣುಗಳು ತನ್ನನ್ನು ಅಡ್ಡಡ್ಡ ನುಂಗಿ ಹಾಕಿ ಬಿಡುತ್ತವೆ ಎಂಬ ಭಯ ಅವನಿಗೆ. ಕಾಲೇಜು, ಕಂಪನಿಗಳಲ್ಲಿ ಇರುವ ಹೆಣ್ಣುಮಕ್ಕಳನ್ನು ಅವನು ದೂರದಲ್ಲೇ